ಕರ್ನಾಟಕ ಸರ್ಕಾರ

# ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ

ಸಂಖ್ಯೆ:-ವಿಪತ್ತು ನಿರ್ವಹಣೆ:ಕೋವಿಡ್-19:1/2020-21 ದಿನಾಂಕ:24-03-2020

## :: ಅಧಿಕೃತ ಜ್ಞಾಪನ ಪತ್ರ ::

ವಿಷಯ:- Novel Coronavirus (COVID-19)ನ ವೈರಸ್ ಸೋಂಕು ತಡೆಗಟ್ಟುವಿಕೆ ಮತ್ತು ನಿಯಂತ್ರಣ ಕಾರ್ಯದ ನಿಮಿತ್ತ ತುರ್ತು ಸಂದರ್ಭದಲ್ಲಿ ಸಾರ್ವಜನಿಕ ಓಡಾಟಕ್ಕಾಗಿ ಅಗತ್ಯ ವಾಹನ ವ್ಯವಸ್ಥೆ ನೀಡಲು ಹಾಗೂ ಉಸ್ತುವಾರಿಗಾಗಿ ಅಧಿಕಾರಿಗಳ ತಂಡವನ್ನು ನೇಮಿಸುವ ಕುರಿತು

ಉಲ್ಲೇಖ:- ಸರ್ಕಾರದ ಆದೇಶ ಅನುಬಂಧ ನಂ ಹೆಚ್ ಎಫ್ ಡಬ್ಲ್ಯೂ 54 ಸಿಜಿಎಂ 2020 ದಿನಾಂಕ:23-3-2020.

---

ಕೋವಿಡ್-19 ಸೋಂಕು ತಡೆಗಟ್ಟುವಿಕೆ ಮತ್ತು ನಿಯಂತ್ರಣ ಕಾರ್ಯದ ನಿಮಿತ್ತ ತುರ್ತು ಸಂದರ್ಭದಲ್ಲಿ ಸಾರ್ವಜನಿಕ ಓಡಾಟಕ್ಕಾಗಿ ಅಗತ್ಯ ವಾಹನ ವ್ಯವಸ್ಥೆ ನೀಡಲು ಈ ಕೆಳಕಂಡ ಅಧಿಕಾರಿಗಳ ತಂಡವನ್ನು ತಕ್ಷಣದಿಂದಲೇ ಜಾರಿಗೆ ಬರುವಂತೆ ರಚಿಸಿ ಆದೇಶಿಸಿದೆ.

| ಕ್ರ.ಸಂ | ತಂಡದ ಸದಸ್ಯರ ವಿವರ | ಮೊಬೈಲ್ ಸಂಖ್ಯೆ |
|---|---|---|
| 1 | ಶ್ರೀ.ನಂದಗಾವಿ<br>ಹೆಚ್ಚುವರಿ ಪೊಲೀಸ್ ಅಧೀಕ್ಷಕರು<br>ಚಿತ್ರದುರ್ಗ | 9480803102 |
| 3 | ಶ್ರೀ.ಹೆಗ್ಡೆ<br>ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಚಿತ್ರದುರ್ಗ | 9449864016 |

ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಅಗತ್ಯ ಸಾರಿಗೆ ವ್ಯವಸ್ಥೆಗಾಗಿ ಸಂಬಂಧಿಸಿದ ಸ್ಥಳೀಯ ಸಂಸ್ಥೆಗಳ ಪೌರಾಯುಕ್ತರು/ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಈ ತಂಡದ ಸದಸ್ಯರನ್ನಾಗಿ ಮಾಡಿಕೊಳ್ಳುವುದು.

ಮೇಲ್ಕಂಡಂತೆ ರಚಿಸಲಾಗಿರುವ ತಂಡವು ಈ ಕೆಳಕಂಡ ಕರ್ತವ್ಯಗಳನ್ನು ಚಾಚೂತಪ್ಪದೇ ಪಾಲಿಸುವುದು.

1. ಸಾರ್ವಜನಿಕರು ಅದರಲ್ಲೂ ವಿಶೇಷವಾಗಿ ವಯಸ್ಸಾದ ಹಿರಿಯ ನಾಗರೀಕರು, ಮಕ್ಕಳು, ಗರ್ಭಿಣಿಯರು ಮುಂತಾದವರ ತುರ್ತು ಸಾರ್ವಜನಿಕ ಓಡಾಟಕ್ಕಾಗಿ ನಗರ ಪ್ರದೇಶ ವ್ಯಾಪ್ತಿಯಲ್ಲಿ ದಿನದ ಸರದಿಯ ಆಧಾರದ ಮೇಲೆ ಬಾಡಿಗೆ ಆಟೋಗಳ ಸೇವೆಯನ್ನು ಒದಗಿಸಲು ಸಂಬಂಧಿಸಿದ ಆರಕ್ಷಕ ಠಾಣೆಯ ವ್ಯಾಪ್ತಿಯಲ್ಲಿ ಆಟೋಗಳ ವ್ಯವಸ್ಥೆಯನ್ನು ಮಾಡುವುದು.
2. ವ್ಯವಸ್ಥೆ ಮಾಡಲಾದ ಆಟೋಗಳು ನಿಗಧಿಪಡಿಸಿದ ಠಾಣೆಯಲ್ಲಿ ಇದ್ದು, ಅವಶ್ಯಕತೆ ಇರುವ ಹಾಗೂ ತುರ್ತ ಸಂದರ್ಭದಲ್ಲಿ ಸಂಬಂಧಿಸಿದ ಠಾಣೆಗೆ ದೂರವಾಣಿ ಕರೆ ಮಾಡಿ ಸೇವೆಯನ್ನು ಪಡೆಯುವ ವ್ಯವಸ್ಥೆಯನ್ನು ಮಾಡುವುದು.

3. ಸ್ಥಳೀಯ ಪೊಲೀಸ್ ಠಾಣೆಯಲ್ಲಿ ಈ ಬಗ್ಗೆ ತಮ್ಮ ದೂರವಾಣಿ ಸಂಖ್ಯೆಗಳನ್ನು ಪ್ರಚುರಪಡಿಸುವುದು.
4. ಆರಕ್ಷಕ ಇಲಾಖೆಯ ನಿರ್ದೇಶನದಂತೆ ಸಾರ್ವಜನಿಕ ಸೇವೆಯನ್ನು ಒದಗಿಸುವ ಕ್ರಮ ಜರುಗಿಸುವುದು.
5. ಕಾರ್ಯಪಾಲನೆಯ ಬಗ್ಗೆ ಕಾಲ ಕಾಲಕ್ಕೆ ಮಾಹಿತಿಯನ್ನು ನೀಡುವುದು.
6. ಜಿಲ್ಲಾಡಳಿತವು ಕಾಲ ಕಾಲಕ್ಕೆ ನೀಡುವ ಸೂಚನೆ, ಮಾರ್ಗದರ್ಶನಗಳನ್ನು ಕಡ್ಡಾಯವಾಗಿ ಪಾಲಿಸುವುದು

ಜಿಲ್ಲಾಧಿಕಾರಿಗಳು
ಚಿತ್ರದುರ್ಗ ಜಿಲ್ಲೆ

ಪ್ರತಿಯನ್ನು:-

1) ಜಿಲ್ಲಾ ಪೊಲೀಸ್ ಅಧೀಕ್ಷಕರು, ಚಿತ್ರದುರ್ಗ ಜಿಲ್ಲೆ
2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯಿತಿ, ಚಿತ್ರದುರ್ಗ
3) ಅಧಿಕಾರಿಗಳ ತಂಡದ ಸದಸ್ಯರುಗಳಿಗೆ ಮಾಹಿತಿ ಹಾಗೂ ಕ್ರಮಕ್ಕಾಗಿ.
4) ಜಿಲ್ಲಾ ಆರೋಗ್ಯ & ಕುಟುಂಬ ಕಲ್ಯಾಣಾಧಿಕಾರಿಗಳು, ಚಿತ್ರದುರ್ಗ
5) ಜಿಲ್ಲಾ ಶಸ್ತ್ರಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ಚಿತ್ರದುರ್ಗ
6) ಜಿಲ್ಲೆಯ ಎಲ್ಲಾ ತಾಲ್ಲೂಕಿನ ತಹಶೀಲ್ದಾರ್ ಗಳು
7) ಜಿಲ್ಲೆಯ ಎಲ್ಲಾ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು.